**ದಿನಾಂಕಃ 23-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ .ವಿ.ಎಸ್.ಎ. ವಕೀಲರಿಂದಃ**

ನಮ್ಮ ಊರು ಶಿವಮೊಗ್ಗ ಎಂದರೆ ಸರಿ. ಅಪಘಾತವು ಶಿವಮೊಗ್ಗ ಜಿಲ್ಲೆಯಲ್ಲಿ ಆಗಿದೆ ಎಂದರೆ ಸರಿ . ನಾನು ರಾಣೇಬೆನ್ನೂರಿನಲ್ಲಿ ಖಾಯಂ ವಾಸವಾಗಿರುವುದಿಲ್ಲ. ಇವತ್ತಿಗೂ ನಾನು ನಮ್ಮ ಊರಿನಲ್ಲಿ ಇರುತ್ತೇನೆ. ಆಟೋ ರಿಕ್ಷಾ ಪಳನಿರಾಜ ರವರಿಗೆ ಸೇರಿರುತ್ತದೆ. ನಾನು ಅವರ ಬಳಿ 1 ½ ವರ್ಷದಿಂದ ಚಾಲಕನೆಂದು ಕೆಲಸ ಮಾಡುತ್ತಿದ್ದೆ. ನಾನು ಅವರ ಬಳಿ ಕೆಲಸ ಮಾಡುತ್ತಿದ್ದೆ ಮತ್ತು ಅವರ ಬಳಿ ತಿಂಗಳಿಗೆ ಹದಿನೈದು ಸಾವಿರ ರೂಪಾಯಿ ಮತ್ತು ದಿನ ಭತ್ಯೆ ರೂ.200/- ಪಡೆಯುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು 1 ನೇ ಎದುರುದಾರರ ಬಳಿ ಚಾಲಕನೆಂದು ಕೆಲಸ ಮಾಡುತ್ತಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಅವರ ಮಧ್ಯ ಕಾರ್ಮಿಕ ಮಾಲೀಕ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿಯವರ ಆಟೋ ಚಲಾಯಿಸುತ್ತಿದ್ದಾಗ ಅಪಘಾತವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವಾದಾಗ ನನಗೆ 50 ವರ್ಷವಾಗಿತ್ತು ಎಂದರೆ ಸರಿಯಲ್ಲ 47 ವರ್ಷ ಆಗಿತ್ತು. ಅಪಘಾತದಲ್ಲಿ ನನ್ನ ಬಲಗಾಲಿನ ಮೂಳೆ ಮುರಿತವಾಗಿರುತ್ತದೆ. ಅಪಘಾತವಾದ ನಂತರ ನಾನು ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಯಲ್ಲಿ 1 ½ ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದೆ. ಮೆಗ್ಗಾನ ಆಸ್ಪತ್ರೆಯಲ್ಲಿ ಎಕ್ಸ-ರೇ ಯನ್ನು ತೆಗೆದಿರುತ್ತಾರೆ. ಮೆಗ್ಗಾನ ಆಸ್ಪತ್ರೆಯಲ್ಲಿ ತೆಗೆದ ಎಕ್ಸ-ರೇಯನ್ನು ನ್ಯಾಯಾಯಕ್ಕೆ ಹಾಜರು ಪಡಿಸಿಲ್ಲ. ನನಗೆ ಮೂಳೆ ಮುರಿತವಾಗಿಲ್ಲ ಸಾಧಾ ಸ್ವರೂಪದ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಆ ಎಕ್ಸ-ರೇ ಯಲ್ಲಿ ಯಾವುದೇ ಸ್ವರೂಪದ ಮೂಳೆ ಮುರಿತ ಕಂಡಿಲ್ಲ ಕಾರಣ ಸದರಿ ಎಕ್ಸ-ರೇ ಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲಿ ಎಂದು ನಿಪಿ-4 ರಿಂದ 6 ನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನಗೆ ಆಟೋ ರಿಕ್ಷಾ ಚಾಲನೆ ಮಾಡಲು ಡಿ.ಎಲ್ ಇಲ್ಲ ಎಂದರೆ ಸರಿಯಲ್ಲ. ಸದರಿ ಡಿ.ಎಲ್ ನ್ನು ಇಟ್ಟುಕೊಂಡು ಇವತ್ತಿಗೂ ಸಹ ಆಟೋ ವನ್ನು ಚಾಲನೆ ಮಾಡುತ್ತೇನೆ ಎಂದರೆ ಸರಿ. ಆ ರೀತಿ ಇಂದಿಗೂ ಸಹ ಡ್ರೈವಿಂಗ್ ಮಾಡಿ ಉತ್ಪನ್ನ ಪಡೆದು ಜೀವನ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಬಲಗಾಲಿನ ತೊಂದರೆಯಿಂದ ನನಗೆ ಆಟೋ ಚಾಲನೆ ಮಾಡಲು ಬರುವುದಿಲ್ಲ. ನನಗೆ ಬಲಗಾಲಿನ ತೊಂದರೆ ಇದೆ ಆಟೋ ಓಡಿಸಲು ಆಗುವುದಿಲ್ಲ ಎಂದು ನಾನು ನನ್ನ ಡಿ.ಎಲ್ ನ್ನು ಆರ್.ಟಿ.ಓ ರವರಿಗೆ ವಾಪಸ್ಸು ಮಾಡಿರುವುದಿಲ್ಲ. ನಾನು ಇಂದಿಗೂ

ಸಹ ಚಾಲನೆ ಕೆಲಸ ಮಾಡುತ್ತಿರುವುದರಿಂದ ಡಿ.ಎಲ್ ನ್ನು ಆರ್.ಟಿ.ಓ ರವರಿಗೆ ವಾಪಸ್ಸು ಮಾಡಿಲ್ಲ ಎಂದರೆ ಸರಿಯಲ್ಲ . ನನ್ನ ಮತ್ತು 1 ನೇ ಎದುರುದಾರನ ಮಧ್ಯ ಕಾರ್ಮಿಕ ಮತ್ತು ಮಾಲೀಕನ ಸಂಬಂಧ ಇಲ್ಲದೇ ಇದ್ದುದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ._

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.